**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಮಿಸ್.ನಂಃ 769/2025**

**ಸಾಕ್ಷಿಯನ್ನು ದಿನಾಂಕಃ 11.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎಂ.ಡಿ. ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ **ಅರ್ಜಿದಾರನಾಗಿರುತ್ತೇನೆ**. ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸುತ್ತೇನೆ.

ತಹಶೀಲ್ದಾರ್ ರವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-1** ಎಂದು, ಗ್ರಾಮ ಆಡಳಿತ ಅಧಿಕಾರಿ ಹಾಗು ರಾಜಸ್ವ ನಿರೀಕ್ಷಕರು ನೀಡಿದ ವರದಿ ಹಾಗು ಜರುಗಿಸಿದ ಮಹಜರ್ ನ ಧೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.-2** ಮತ್ತು **ನಿ.ಪಿ.-3** ಎಂದು, ವಂಶವೃಕ್ಷ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-4** ಎಂದು, ದಿನಾಂಕಃ 24.01.2026 ರ **ರಾಜ್ಯ ಧರ್ಮ** ದಿನಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-5** ಎಂದು, ಪತ್ರಿಕಾ ಪ್ರಕಟಣೆಯನ್ನು **ನಿ.ಪಿ.-5(ಎ)** ಎಂದು, ಆಧಾರ್ ಕಾರ್ಡ್ ನ ನೋಟರಿ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-6** ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ಗಮನಿಸಿ ನನ್ನ ಅರ್ಜಿಯನ್ನು ಪುರಸ್ಕರಿಸಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರರು ಏಕಪಕ್ಷೀಯವಾಗಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಲಾಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**C/c 1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**